# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 21-01-2023 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

<u>ಹಾಜರಿದ್ದ ಅಧಿಕಾರಿಗಳು</u>

1. ಶ್ರೀ ವಿನೋದ್, ಅಧ್ಯಕ್ಷರು (ನೋಡೆಲ್ ಅಧಿಕಾರಿ)
2. ಶ್ರೀ ಶಂಕರಪ್ಪ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27/100
4. ಶ್ರೀ ಜೆ.ಸಿ. ಗೀತಾ (JE, BESCOM)
5. ಶ್ರೀ ದಯಾನಂದ ರಾಜು, ಸಹಾಯಕ ಅಭಿಯಂತರರು (ಬೀದಿ ದೀಪಗಳ ನಿರ್ವಹಣೆ ವಿಭಾಗ)
6. ಶ್ರೀ ಮಂಜುನಾಥ (JE, BWSSB)
7. ಶ್ರೀ ಮುಕುಂದಯ್ಯ (ASI, Banasawadi Traffic Police Station)
8. ಶ್ರೀ ಭೀಮಾಶಂಕರ್ (HC-10412, Banasawadi L&O Police Station)
9. ಶ್ರೀ ಕೆ. ಶಿವಯ್ಯ, ಕೆಲಸ ಪರಿವೀಕ್ಷಕರು, BWSSB

<u>ಹಾಜರಿದ್ದ ಸದಸ್ಯರು/ ಸ್ಥಳೀಯ ನಿವಾಸಿಗಳು</u>

1. ಶ್ರೀ ಶಿವಾನಂದ ಕಾರ್ಯದರ್ಶಿ, (BWA)
2. ಶ್ರೀ ಅಮಿತ್ ನಿಗ್ಲಿ, ಬಾಣಸವಾಡಿ
3. ಶ್ರೀ ಕರ್ನಲ್ ಗೋರ್ಪಡೆ, ಬಾಣಸವಾಡಿ
4. ಶ್ರೀ ಶ್ರೀಧರ ಎಂ., ಬಾಣಸವಾಡಿ
5. ಶ್ರೀ ಎಸ್.ಪಿ. ಹೆಗಡೆ, ಬಾಣಸವಾಡಿ
6. ಶ್ರೀ ಕ್ರಿಸ್ಟೋಫರ್ ಎಸ್. ಕ್ರೂಜ್, ಬಾಣಸವಾಡಿ
7. ಶ್ರೀ ಪ್ರಶಾಂತ್, ಬಾಣಸವಾಡಿ
8. ಶ್ರೀ ಎಸ್. ಗಣೇಶ್, ಬಾಣಸವಾಡಿ
9. ಶ್ರೀ ಶ್ರೀರಾಮ್, ಬಾಣಸವಾಡಿ
10. ಶ್ರೀ ಎಸ್. ಬಾಬು ಮಹೇಂದರ್, ಬಾಣಸವಾಡಿ

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರುರವರು ಸ್ವಾಗತವನ್ನು ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ ಲೇಔಟ್‌ನ 2ನೇ ಕ್ರಾಸ್, 3ನೇ ಕ್ರಾಸ್, 4ನೇ ಮೇನ್, 80 ಅಡಿ ರಸ್ತೆ, 5ನೇ ಮೇನ್, 7ನೇ ಮೇನ್‌ಗಳಲ್ಲಿ ಫುಟ್‌ಪಾತ್‌ಗಳಲ್ಲಿ ಅಂಡಿಗಳನ್ನು ನಡೆಸುತ್ತಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಆ ಸ್ಥಳಗಳಲ್ಲಿ ಫುಟ್‌ಪಾತ್ ಡ್ರೈವನ್ನು ಮಾಡಬೇಕಾಗಿ ಕ್ರಿಸ್ಟೋಫರ್ ಎಸ್‌ಕ್ರೂಜ್ ರವರು ಸಭೆಯಲ್ಲಿ ತಿಳಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು/ ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ.27/100) **SHI/AE** |

| | | |
|---|---|---|
| 2 | ಎ) ವಾರ್ಡ್ ವ್ಯಾಪ್ತಿಯ 2ನೇ 'ಕೆ' ಕ್ರಾಸ್, ಹೆಚ್‌ಆರ್‌ಬಿ ಆರ್ 1ನೇ ಬ್ಲಾಕ್, ರಸ್ತೆಗಳು ತೀರಾ ಹದಗೆಟ್ಟಿದ್ದು, ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಈ ರಸ್ತೆಗಳು DLP ಅವಧಿಯಲ್ಲಿದ್ದು, ಸದರಿ ರಸ್ತೆಗಳನ್ನು ಪುನಶ್ಚೇತನಗೊಳಿಸಲು ಹಿಂದಿನ ಸಭೆಯಲ್ಲಿ ಕರ್ನಲ್ ಗೋಪ್ಪಡೆಯವರು ಕೋರಿದ್ದರು. ಇದಕ್ಕೆ ಸಂಬಂಧಿಸಿದಂತೆ ಹಿಂದಿನ ಸಹಾಯಕ ಅಭಿಯಂತರರೊಂದಿಗೆ ಮಾತನಾಡಿ ಗುತ್ತಿಗೆದಾರರಿಂದ ಆಯ್ದ ಭಾಗಗಳಲ್ಲಿ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುವುದೆಂದು (ಪುನಶ್ಚೇತನ) ವಾರ್ಡಿನ ಕಾರ್ಯದರ್ಶಿಗಳು ತಿಳಿಸಿದರು.<br><br>ಬಿ) ವಾರ್ಡ್ ವ್ಯಾಪ್ತಿಯಲ್ಲಿ ಬಾಣಸವಾಡಿ ಕ್ಲಬ್‌ನ ಎದುರು ಕಟ್ಟಡವನ್ನು ನಿರ್ಮಿಸುತ್ತಿರುವ ಮಾಲೀಕರು ರಸ್ತೆಯಲ್ಲಿ ರ್‍ಯಾಂಪ್ ಹಾಕಿರುವುದರಿಂದ ಸ್ಥಳೀಯರಿಗೆ ತೊಂದರೆಯಾಗುತ್ತಿರುವುದರಿಂದ ರ್‍ಯಾಂಪನ್ನು ತೆರವುಗೊಳಿಸಬೇಕಾಗಿ ಸಭೆಯಲ್ಲಿ ಸ್ಥಳೀಯ ನಿವಾಸಿಗಳು ಪ್ರಸ್ತಾಪಿಸಿದರು.<br><br>ಸಿ) ವಾರ್ಡ್ ವ್ಯಾಪ್ತಿಯ ಓಎಂಬಿಆರ್ ಲೇಔಟ್‌ನ 4ನೇ ಅಡ್ಡರಸ್ತೆಯ ರಸ್ತೆಯು ಬಹಳ ಹದಗೆಟ್ಟಿರುವುದರಿಂದ Asphalting ಮಾಡಿಸಬೇಕಾಗಿ ಹೆಗಡೆರವರು ಸಭೆಯಲ್ಲಿ ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿರುವುದಾಗಿ ಸಭೆಯಲ್ಲಿ ಕಾರ್ಯದರ್ಶಿಯವರು ತಿಳಿಸಿದರು.<br><br>ಡಿ) ವಾರ್ಡ್ ವ್ಯಾಪ್ತಿಯ 9ನೇ ಮುಖ್ಯರಸ್ತೆ ಹಾಗೂ 10ನೇ ಮುಖ್ಯರಸ್ತೆಗಳಲ್ಲಿ ವಸತಿಯೇತರ ಕಟ್ಟಡಗಳನ್ನು ವಾಣಿಜ್ಯ ಉದ್ದೇಶಗಳಿಗೆ ಮಾರ್ಪಾಟು ಮಾಡುತ್ತಿರುವದರಿಂದ ಸ್ಥಳೀಯರಿಗೆ ತೊಂದರೆ ಯಾಗುತ್ತಿದ್ದು, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿ ಕ್ರಿಸ್ಟೋಫರ್ ಕ್ರೂಜ್ ರವರು ಸಭೆಯಲ್ಲಿ ಕೋರಿದರು. ಇದಕ್ಕೆ ಸಂಬಂಧಿಸಿದಂತೆ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ ಮುಂದಿನ ಕ್ರಮ ವಹಿಸಲು ಸೂಚಿಸಲಾಗುವುದೆಂದು ಕಾರ್ಯದರ್ಶಿಗಳು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 3 | ಎ)ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಪಾರ್ಕ್‌ಗಳಲ್ಲಿಯು ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಅದರ ನಿರ್ವಹಣೆಯನ್ನು ಸಮರ್ಪಕವಾಗಿ ನಡೆಸಬೇಕಾಗಿ ಕ್ರಿಸ್ಟೋಫರ್ ರವರು ಸಭೆಯಲ್ಲಿ ತಿಳಿಸಿದರು. | **ತೋಟಗಾರಿಕಾ ಇಲಾಖೆ / ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ) ಪೂರ್ವ** |

| | | |
|---|---|---|
| 4 | ಬಿ) 9ನೇ ಮುಖ್ಯರಸ್ತೆಯ ಇಂಟರ್‌ಸೆಕ್ಷನ್ ಪಾಯಿಂಟ್‌ನ ಬಳಿ ವಾಹನಗಳ ನಿಲುಗಡೆಯು ಹೆಚ್ಚಾಗಿರುವುದರಿಂದ ಸ್ಥಳೀಯರಿಗೆ ತೊಂದರೆಯಾಗುತ್ತಿರುವ ಕಾರಣ ಆ ರಸ್ತೆಗಳಲ್ಲಿ No Parking Board ಗಳನ್ನು ಅಳವಡಿಸಬೇಕಾಗಿ ಪ್ರಶಾಂತ್‌ರವರು ಸಭೆಯಲ್ಲಿ ತಿಳಿಸಿದರು. | ಆರಕ್ಷಕ ನಿರೀಕ್ಷಕರು<br>ಸಂಚಾರ ಪೊಲೀಸ್ ಠಾಣೆ<br>ಬಾಣಸವಾಡಿ |
| 5 | ವಾರ್ಡ್‌ವ್ಯಾಪ್ತಿಯ ಓಎಂಬಿಆರ್ ಲೇಔಟ್‌ನ 3ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಸುತ್ತಿಲ್ಲದಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕಾಗಿ ಮಣಿರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಕೂಡಲೇ ಸಮಸ್ಯೆ ಪರಿಹರಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರಾದ ಶ್ರೀ ಮಂಜುನಾಥ್ ರವರು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಲಮಂಡಳಿ ಉಪ ವಿಭಾಗ-ಪೂರ್ವ ವಲಯ |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ವಲಯ ಅರಣ್ಯಾಧಿಕಾರಿಗಳು, ತೋಟಗಾರಿಕೆ ಮತ್ತಿತರೆ ಗೈರು ಹಾಜರಾಗಿರುವ ಅಧಿಕಾರಿ/ನೌಕರರು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

**ಪ್ರತಿಯನ್ನು**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ